ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)

T.N1.2241/2122.23
ಸಂಖ್ಯೆ:ವಾತೆಜಂಆ(ಆ)/ವಿ..ಸ&ಸೇ.ತೆ.ಕ–2/
ವಾಹನ/ಸಿಆರ್–04/2022–23

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ) ರವರ ಕಛೇರಿ
ವಿ.ಸ.&.ಸೇ.ತೆ.ಕ–2 ನಂ,642, 2ನೇ ಮಹಡಿ, ಪಯೋನಿರ್ ಪ್ಲಾಜ,
ರಾಜರಾಜೇಶ್ವರಿ ನಗರ, ಬೆಂಗಳೂರು ದಿನಾಂಕ: 14/02/2023

## ಟೆಂಡರ್ ಅಧಿಸೂಚನೆ

ವಿಷಯ:– ದಿನಾಂಕ: 01/04/2023 ರಿಂದ 31/03/2024 ರ ಅವಧಿಗೆ ಈ ವಿಭಾಗಕ್ಕೆ 13 ಮಾಲೀಕರೇ ಚಾಲಕರಾಗಿರುವ ಖಾಸಗಿ ವಾಹನಗಳನ್ನು ಮಾಸಿಕ ಬಾಡಿಗೆ ಮೂಲಕ ಪಡೆದುಕೊಳ್ಳುವ ಬಗ್ಗೆ.

ಉಲ್ಲೇಖ:– ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರ ಪತ್ರ ಸಂಖ್ಯೆ:ವಿ.ಹೆಚ್.ಟಿ/ಸಿ.ಆರ್–15/2022–23 ದಿನಾಂಕ: 22/12/2022

***********

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ) ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–2 ಬೆಂಗಳೂರು–98 ವಿಭಾಗದ ಕಛೇರಿಗಳ ಉಪಯೋಗಕ್ಕಾಗಿ 13 ಮಾಲೀಕರೇ ಚಾಲಕರಾಗಿರುವ ಖಾಸಗಿ ವಾಹನಗಳನ್ನು ಮಾಸಿಕ ಬಾಡಿಗೆ ಅಧಾರದ ಮೇಲೆ ಪಡೆಯಲು ಉಲ್ಲೇಖ (2)ರ ಪತ್ರದನ್ವಯ ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು ಅನುಮತಿ ನೀಡಿರುತ್ತಾರೆ. ಆದರಂತೆ ಮಾಲೀಕರೇ ಚಾಲಕರಾಗಿರುವ ವಾಹನ ಚಾಲಕರಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಆಸಕ್ತ ಮಾಲೀಕರೇ ಚಾಲಕರಾಗಿರುವವರು ಮಾತ್ರ ಅರ್ಜಿಯನ್ನು ಸಲ್ಲಿಸುವುದು. ಸರ್ಕಾರಿ ಆದೇಶ ಸಂಖ್ಯೆ:ಶಿಅಸುಇ 96 ಶಿವಾನೀ 2012 ದಿನಾಂಕ: 23/08/2012 ರಲ್ಲಿ ನಿಗಧಿಪಡಿಸಿರುವ ಷರತ್ತೀಗೋಳಪಟ್ಟು ಖಾಸಗಿ ವಾಹನಗಳ ಸೇವೆಯನ್ನು ಪಡೆಯಲಾಗುವುದು.

1. ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರವರ ಪರಿಷ್ಕರಣೆಯ ಸುತ್ತೋಲೆ ಸಂಖ್ಯೆ:ವಿ.ಹೆಚ್.ಟಿ/ಸಿ.ಆರ್–22/2019–20 ದಿನಾಂಕ: 27/04/2022ರಲ್ಲಿ ನಿಗಧಿಪಡಿಸಿರುವಂತೆ ವಾಹನಗಳ ಬಾಡಿಗೆ ದರ ಹವಾ ನಿಯಂತ್ರಣ ರಹಿತ ವಾಹನಗಳಿಗೆ ತಿಂಗಳಿಗೆ ರೂ.35,000–00 ನೀಡಲಾಗುವುದು.
2. 2018 ಮತ್ತು ನಂತರದ ವರ್ಷಗಳಲ್ಲಿ ತಯಾರಾದ ವಾಹನಗಳಾಗಿರಬೇಕು, ಪ್ರತಿ ವಾಹನದ ಗುಣಮಟ್ಟ ಹಾಗೂ ಚಾಲನಾ ಕೌಶಲ್ಯವನ್ನು ಪರೀಶಿಲಿಸಿ ನಂತರವೇ ವಾಹನಗಳನ್ನು ತೆಗೆದುಕೊಳ್ಳಲಾಗುವುದು.
3. ದಿನಾಂಕ: 01/04/2023 ರಿಂದ ಅನ್ವಯವಾಗುವಂತೆ ಈ ಹಿಂದೆ ಸತತವಾಗಿ 5 ವರ್ಷಗಳ ಕಾಲ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಸೇವೆ ಸಲ್ಲಿಸಿರುವ ಯಾವುದೇ ಮಾಲೀಕರೇ ಚಾಲಕರಾಗಿರುವ ಖಾಸಗಿ ವಾಹನಗಳ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
4. ಗುತ್ತೀಗೆ ಅವಧಿ ದಿನಾಂಕ: 01/04/2023 ರಿಂದ 31/03/2024 ರವರೆಗೆ
5. ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 28–02–2023 ಸಂಜೆ 5.00 ಘಂಟೆಯವರೆಗೆ ಆ ನಂತರ ಸಲ್ಲಿಸಿದ ಅರ್ಜಿಗಳನ್ನು ಪುರಸ್ಕರಿಸಲಾಗುವುದಿಲ್ಲ.

## ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು/ವಿವರಗಳು

| ಕ್ರ.ಸಂ | ವಿವರಗಳು |
|---|---|
| 1 | ಅರ್ಜಿದಾರರ ಹೆಸರು, ವಿಳಾಸ ಹಾಗೂ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು–2 |
| 2 | ವಿಳಾಸದ ದಾಖಲೆಯಾಗಿ, ಮತದಾರರ ಗುರುತಿನ ಚೀಟಿ, ರೇಷನ್ ಕಾರ್ಡ್, ಅಧಾರ್ ಕಾರ್ಡ್, ಪಾಸ್ ಪೋರ್ಟ್ ಅಥವಾ ಇತರೆ ಭಾವಚಿತ್ರ ಹೊಂದಿರುವ ಗುರುತಿನ ಚೀಟಿ ಹಾಗೂ ಖಾಯಂ ವಿಳಾಸದ ದಾಖಲೆ, ಬ್ಯಾಂಕ್ ಖಾತೆಯ ವಿವರಗಳು/ಚೆಕ್‌ನ ಪ್ರತಿ. |
| 3 | ವಾಹನದ ನೋಂದಣಿ ಪುಸ್ತಕದ ಪ್ರತಿ–ಪ್ರಮಾಣ ಪತ್ರ (R.C.Card) |
| 4 | ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿರುವ ವಾಹನದ ವಿಮಾ ಪಾಲಿಸಿಯ ಪ್ರತಿ |
| 5 | ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿರುವ ವಾಹನ ಚಾಲನಾ ಪ್ರತಿ |
| 6 | ರಸ್ತೆ ತೆರಿಗೆ ಪಾವತಿಸಿರುವ ವಿವರ |
| 7 | ಮಾಲೀಕ/ಚಾಲಕರ ದೈಹಿಕ ಸಾಮರ್ಥ್ಯ ಪ್ರಮಾಣ ಪತ್ರ |
| 8 | ಪಾನ್ ಕಾರ್ಡ್/ ಅಧಾರ್ ಕಾರ್ಡ್ ಪ್ರತಿಗಳು |
| 9 | ಮೇಲ್ಕಂಡ ವಿವರಗಳು ಹಾಗೂ ಎಲ್ಲಾ ದಾಖಲಾತಿಗಳ ಪ್ರತಿಗಳನ್ನು ಸೀಲು ಮಾಡಿದ ಲಕೋಟೆಯಲ್ಲಿಟ್ಟು ಲಕೋಟೆಯ ಮೇಲೆ ದಪ್ಪ ಅಕ್ಷರಗಳಲ್ಲಿ **ಖಾಸಗಿ ವಾಹನ ಮಾಲೀಕರೇ ಚಾಲಕರು ಹೊರಗುತ್ತಿಗೆ ಸೇವೆ ಸಲ್ಲಿಸಲು ಅರ್ಜಿ** ಎಂದು ನಮೂದಿಸುವುದು. |
| 10 | ಅಪೂರ್ಣ ವಿವರಗಳು ಹಾಗೂ ಮೇಲ್ಕಂಡ ದಾಖಲಾತಿಗಳನ್ನು ಸಲ್ಲಿಸದೇ ಇದ್ದ ಪಕ್ಷದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು. |
| 11 | ಅರ್ಜಿಗಳನ್ನು ಖುದ್ದಾಗಿ ವಾಣಿಜ್ಯ ತೆರಿಗೆಗಳ ಜಂಟಿ ಅಯುಕ್ತರು (ಆಡಳಿತ) ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–2, ನಂ.642, 2ನೇ ಮಹಡಿ, ಪಯೋನೀರ್ ಪ್ಲಾಜಾ ಕೆಂಚೇನಹಳ್ಳಿ ಮುಖ್ಯ ರಸ್ತೆ, ರಾಜರಾಜೇಶ್ವರಿ ನಗರ, ಬೆಂಗಳೂರು–560098, ರವರ ಕಚೇರಿಯಲ್ಲಿ ಸಲ್ಲಿಸುವುದು, ಹಾಗೂ ಅರ್ಜಿಗಳ ಸ್ವೀಕೃತಿಗೆ ಅನುಸಾರವಾಗಿ ಕ್ರಮ ಸಂಖ್ಯೆ ನೀಡಲಾಗುವುದು. |
| 12 | ಅರ್ಜಿಗಳನ್ನು ಸಲ್ಲಿಸಿರುವುದಕ್ಕೆ ಸ್ವೀಕೃತಿ ಪಡೆಯುವುದು, ಹಾಗೂ ಕಾರ್ಯ ನಿರ್ವಹಣೆಯಲ್ಲಿ ಪಾಲಿಸಬೇಕಾದ ನಿಯಮಗಳು/ಷರತ್ತುಗಳ ವಿವರಗಳ ಪಟ್ಟಿ ಅನ್ವಯ ನಿಯಮಗಳನ್ನು ಅರ್ಹಗೊಳ್ಳುವ ವಾಹನ ಮಾಲೀಕ/ಚಾಲಕರು ಕಡ್ಡಾಯವಾಗಿ ಪಾಲಿಸತಕ್ಕದ್ದು. |
| 13 | **ಅರ್ಹಗೊಂಡ ಅರ್ಜಿದಾರರ ವಿವರಗಳ ಪಟ್ಟಿಯ ಪ್ರಕಟಣೆ ದಿನಾಂಕ: 04/03/2023** |

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು,(ಆಡಳಿತ),
ವಿಭಾಗೀಯ ಜಂಟಿ ಆಯುಕ್ತರು
(ಆಡಳಿತ) ವಿ.ಸ.& ಸೇ.ತೆ.ಕ–2, ಬೆಂಗಳೂರು

## ಷರತ್ತು ಮತ್ತು ನಿಬಂಧನೆಗಳು:

| | |
|---|---|
| 1 | ಅನಾರೋಗ್ಯವೂ ಸೇರಿದಂತೆ ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಒಂದು ತಿಂಗಳಲ್ಲಿ ಎರಡು ದಿನ ಮಾತ್ರ ವಾಹನ ಉಪಯೋಗಿಸುವ ಕಛೇರಿಯ ಅಧಿಕಾರಿಯವರಿಂದ ಅನುಮತಿ ಪಡೆದು, ಮಾಲೀಕ-ಚಾಲಕರು ರಜೆ ಪಡೆಯಬಹುದು. ಆ ಅವಧಿಯಲ್ಲಿ ಬದಲಿ ವಾಹನದ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡಲೇಬೇಕು. ಇಲ್ಲದಿದ್ದರೆ ಗೈರುಹಾಜರಿ ದಿವಸ ಎಂದು ಪರಿಗಣಿಸಿ ಬಾಡಿಗೆ ಕಡಿತಗೊಳಿಸಲಾಗುವುದು. ಜೊತೆಗೆ ಸಾರ್ವತ್ರಿಕ ರಜೆ ದಿನಗಳಲ್ಲಿ ಅಗತ್ಯ ವಿದ್ದಾಗ ತುರ್ತು ಕೆಲಸಗಳ ಸಂದರ್ಭಗಳಲ್ಲಿ ವಾಹನ ಚಾಲಕರು ಹೆಚ್ಚುವರಿ ಬಾಡಿಗೆಯನ್ನು ನಿರೀಕ್ಷಿಸದೆ ಕಛೇರಿ ಕರ್ತವ್ಯ ನಿರ್ವಹಿಸಲು ಸಿದ್ಧರಿರಬೇಕು. |
| 2 | ಮಾಸಿಕ ಬಾಡಿಗೆ ಆಧಾರದ ಮೇಲೆ ಹಾಗೂ ಕರಾರಿನಂತೆ ದರಗಳಿಗೆ ಒಳಪಟ್ಟ ವಾಹನಗಳನ್ನು ಮಾತ್ರ ಬಾಡಿಗೆಗೆ ಪಡೆಯಲಾಗುತ್ತದೆ. |
| 3 | ಮಾಲೀಕ–ಚಾಲಕರು ಕಟ್ಟುನಿಟ್ಟಾಗಿ ಸಮಯಪಾಲನೆ ಮಾಡತಕ್ಕದ್ದು. ಕರ್ತವ್ಯದ ಸಮಯದಲ್ಲಿ ಕಡ್ಡಾಯವಾಗಿ ಸಮವಸ್ತ್ರವನ್ನು ಧರಿಸಬೇಕು. ವಾಹನ ಉಪಯೋಗಿಸುವ ಕಛೇರಿಯ ಮುಖ್ಯಸ್ಥರಿಂದ ಈ ಕುರಿತು ದೂರುಗಳು ಬಂದಲ್ಲಿ ಅಂತಹ ವಾಹನದ ಬಳಕೆಯನ್ನು ನಿಲ್ಲಿಸುವ, ಒಪ್ಪಂದವನ್ನು ರದ್ದುಪಡಿಸುವ ಅಧಿಕಾರ ವಾಣಿಜ್ಯ ತೆರಿಗೆ ಅಪರ ಆಯುಕ್ತರವರದ್ದಾಗಿರುತ್ತದೆ. |
| 4 | ಇಲಾಖೆಯ ಈ ವಿಭಾಗದ ಪ್ರತಿ ಕಛೇರಿಯಲ್ಲಿ ಉಪಯೋಗಿಸುವ ಪ್ರತಿ ವಾಹನಕ್ಕೆ ಸಂಬಂಧಿಸಿದಂತೆ ನಿಗಧಿತ ಲಾಗ್ ಪುಸ್ತಕವನ್ನು ನಿರ್ವಹಿಸಿ ಪ್ರತಿ ದಿನದ ಆರಂಭ ಮತ್ತು ಅಂತ್ಯದವರೆಗಿನ ವಾಹನ ಓಡಾಟದ ಸಂಬಂಧ ಈ ಪುಸ್ತಕದಲ್ಲಿ ಅಗತ್ಯ ದಾಖಲೆಗಳನ್ನು ನಮೂದಿಸಿ ವಾಹನವನ್ನು ಉಪಯೋಗಿಸಿದ ಅಧಿಕಾರಿಯವರಿಂದ ರುಜು ಪಡೆಯತಕ್ಕದ್ದು. |
| 5 | ಈ ವಿಭಾಗದ ಪ್ರತಿ ಕಛೇರಿಯಲ್ಲಿ ಉಪಯೋಗಿಸುವ ವಾಹನ ಓಡಾಟಕ್ಕೆ ಸಂಬಂಧಿಸಿದಂತೆ ಆಯಾ ದಿನದ ಆರಂಭಿಕ ಮತ್ತು ಅಂತಿಮ ಸಮಯದ ಗಣನೆ ಮತ್ತು ಕಿಲೋಮೀಟರ್‌ನ ಗಣನೆಯು ಆಯಾ ಕಛೇರಿಯ ಆವರಣದಿಂದ ಕಛೇರಿ ಕಾರ್ಯದ ನಿಮಿತ್ತ ಆ ವಾಹನ ಹೊರಡುವ ಕ್ಷಣದಿಂದ ಪ್ರಾರಂಭವಾಗುತ್ತದೆ. ಹಾಗೂ ಆ ದಿನದ ಕಾರ್ಯ ಮುಗಿದ ಮೇಲೆ ಅದೇ ಸ್ಥಳದಲ್ಲಿ ಕೊನೆಗೊಳ್ಳುತ್ತದೆ. |
| 6 | ಯಾವುದೇ ತಿಂಗಳಿನ ವಾಹನ ಬಾಡಿಗೆ ಹಣವನ್ನು ಅದರ ಮುಂದಿನ ತಿಂಗಳು ವಾಹನ ಮಾಲೀಕರು ಸಲ್ಲಿಸುವ ಬಿಲ್ಲಿನ ಆಧಾರದ ಮೇಲೆ ಪಾವತಿಸಲಾಗುವುದು. ಇಲಾಖೆಗೆ ಬಾಡಿಗೆ ಹಣದ ಬಿಲ್ಲನ್ನು ಸಂಬಂಧಿಸಿದ ವಾಹನದ ಲಾಗ್ ಪುಸ್ತಕದ ಕಛೇರಿ ಮುಖ್ಯಸ್ಥರಿಂದ ಧೃಢೀಕೃತವಾದ ನಕಲು ಪ್ರತಿ ಮತ್ತು ವಾಹನ ಉಪಯೋಗಿಸಿದ ಕಛೇರಿಯ ಮುಖ್ಯಸ್ಥರ ಸೂಕ್ತ ಪ್ರಮಾಣಪತ್ರದ ಜೊತೆ ಪ್ರತಿ ತಿಂಗಳ 5ನೇ ತಾರೀಖಿನೊಳಗೆ ಸಲ್ಲಿಸತಕ್ಕದ್ದು. |
| 7 | ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಈ ಇಲಾಖೆಗೆ ಒದಗಿಸುವ ಕಾಲಮಿತಿಯು ಆರಂಭದಲ್ಲಿ ದಿನಾಂಕ: 01–04–2023 ರಿಂದ 31–03–2024 ರವರೆಗೆ ಇರುತ್ತದೆ. ಅಗತ್ಯವಿದ್ದರೆ ಸದರಿ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಅಥವಾ ಇನ್ನೂ ಹೆಚ್ಚಿನ ಷರತ್ತುಗಳ ಜೊತೆಗೆ ಮತ್ತೊಂದು ವರ್ಷದ ಒಂದು ತ್ರೈಮಾಸಿಕದ ಅವಧಿಗೆ ವಾಹನ ಮಾಲೀಕರು ಮತ್ತು ಈ ಇಲಾಖೆಯ ಆಯುಕ್ತರ ಲಿಖಿತ ಇಚ್ಛೆಯ ಮೇರೆಗೆ ಮುಂದುವರಿಸಬಹುದಾಗಿದೆ. ಇದಕ್ಕೂ ಮೊದಲು ಸಹ ಕರಾರು ರದ್ದುಗೊಳಿಸುವ ಹಕ್ಕು ಆಯುಕ್ತರು/ಜಂಟಿ ಆಯುಕ್ತರವರದ್ದಾಗಿರುತ್ತದೆ. ಅಲ್ಲದೆ ಅವಧಿಗೆ ಮುನ್ನಾ ಮೇಲ್ಕಂಡ ಕರಾರನ್ನು ರದ್ದುಗೊಳಿಸುವ ಹಕ್ಕು ವಾಣಿಜ್ಯ ತೆರಿಗೆ ಆಯುಕ್ತರಿಗೆ / ಜಂಟಿ ಆಯುಕ್ತರಿಗೆ ಇರುತ್ತದೆ. |
| 8 | ವಾಹನವನ್ನು ಸರಕಾರಿ ಕೆಲಸಕ್ಕೆ ಉಪಯೋಗಿಸುವಾಗ ''ಸರಕಾರಿ ಕೆಲಸದ ಮೇಲೆ'' ಅಥವಾ ''ಕರ್ನಾಟಕ ಸರ್ಕಾರದ ಸೇವೆಯಲ್ಲಿ'' ಎಂಬ ಫಲಕವಿರಬೇಕು. ಪಾರ್ಕಿಂಗ್ ಶುಲ್ಕ ಇತ್ಯಾದಿ ವಾಹನ ಮಾಲೀಕರೇ ಭರಿಸತಕ್ಕದ್ದು. |
| 9 | ವಾಹನದ ಯಾವುದೇ ಕಾನೂನು ಉಲ್ಲಂಘನೆಗೆ ಸ್ವತಃ ಮಾಲೀಕ/ಚಾಲಕರೇ/ಟ್ರಾವಲ್ ಏಜನ್ಸೀಸ್/ಸಂಸ್ಥೆಯವರೇ ಜವಾಬ್ದಾರರಾಗಿರುತ್ತಾರೆ. |
| 10 | ವಾಹನವನ್ನು ಕಛೇರಿಯ ಕೆಲಸಕ್ಕೆ ಉಪಯೋಗಿಸಿದ ನಂತರ ಸಂಬಂಧಪಟ್ಟ ಅಧಿಕಾರಿಗಳಿಂದ ಕಾಲಕಾಲಕ್ಕೆ ಸರಿಯಾಗಿ ಉಪಯೋಗಿಸಿದ ವಿವರದೊಂದಿಗೆ ಟ್ರಿಪ್ ಶೀಟ್‌ನಲ್ಲಿ ಭರ್ತಿ ಮಾಡಿ ಸಹಿ ಮಾಡುವುದು. |
| 11 | ಈ ಇಲಾಖೆಗೆ ಹೊರ ಗುತ್ತಿಗೆ ಆಧಾರದ ಮೇಲೆ ವಾಹನವನ್ನು ಪಡೆದಿರುವಂತಹ ಅವಧಿಯಲ್ಲಿ ಬೇರೆ ಯಾವುದೇ ಇಲಾಖೆಯಲ್ಲಿ ಅಥವಾ ಖಾಸಗಿ ಸಂಸ್ಥೆಯಲ್ಲಿ ಅಥವಾ ಬೇರೆ ಇನ್ನಾವುದೇ ಕೆಲಸಗಳಿಗೆ ವಾಹನವನ್ನು ಉಪಯೋಗಿಸುವಂತಿಲ್ಲ, ಹಾಗೂ ವಾಹನವನ್ನು ಪೂರ್ಣವಾಗಿ ''ವಾಣಿಜ್ಯ ತೆರಿಗೆ ಇಲಾಖಾ ಸೇವೆಗಾಗಿ'' ಮೀಸಲಿಡತಕ್ಕದ್ದು. |

| | |
|---|---|
| 12 | ಈ ಭಾಗದ ಅಧಿಕಾರಿಗಳು ರಜೆ/ಅನ್ಯ ಸೇವೆ/ಇನ್ಯಾವುದೇ ಕಛೇರಿ ಕಾರ್ಯ ನಿಮಿತ್ತ ಕಛೇರಿಯಿಂದ ಹೊರಗೆ ತೆರಳಿದ ಸಂದರ್ಭದಲ್ಲಿ ಅವರಿಗೆ ಸಂಬಂಧಿಸಿದ ವಾಹನ ಚಾಲಕರು ಆ ದಿನ ಪೂರ್ವಾಹ್ನ 10–00 ಗಂಟೆಗೆ ಕಡ್ಡಾಯವಾಗಿ ಪತ್ರಾಂಕಿತ ವ್ಯವಸ್ಥಾಪಕರ ಬಳಿ ವರದಿ ಮಾಡಿಕೊಂಡು ಕಛೇರಿ ಆವರಣದಲ್ಲಿಯೇ ವಾಹನದೊಂದಿಗೆ ಇರತಕ್ಕದ್ದು. ಇಲ್ಲದಿದ್ದ ಪಕ್ಷದಲ್ಲಿ ಗೈರು ಹಾಜರು ಎಂದು ಪರಿಗಣಿಸಿ ಆ ದಿನದ ಸಂಭಾವನೆಯನ್ನು ಕಡಿತಗೊಳಿಸಲಾಗುವುದು. |
| 13 | ಖಾಸಗಿ ವಾಹನ ಮಾಲೀಕರು/ಚಾಲಕರು/ಟ್ರಾವಲ್ ಏಜನ್ಸೀಸ್/ಸಂಸ್ಥೆಯವರ ಮಾಸಿಕ ಬಾಡಿಗೆಗೆ ಸಂಬಂಧಿಸಿದಂತೆ ಈ ಕಛೇರಿಗೆ ಬಿಲ್ಲುಗಳನ್ನು ಸಲ್ಲಿಸುವಾಗ ಮಾಹೆಯಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಗಳು, ಒಟ್ಟು ಓಡಿಸಿದ ಕಿಲೋಮೀಟರ್ ಮತ್ತು ಸಮಯಕ್ಕೆ ಸಂಬಂಧಿಸಿದಂತೆ ದೃಢೀಕೃತ ಪ್ರಮಾಣ ಪತ್ರವನ್ನು ಅಧಿಕಾರಿಗಳಿಂದ ಪಡೆದು ಬಿಲ್ಲಿನ ಜೊತೆ ಸಲ್ಲಿಸುವುದು. |
| 14 | ಮೇಲಿನ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸದಿರುವುದು ಮತ್ತು ನಿರ್ಲಕ್ಷಿಸಿರುವುದು ಕಂಡುಬಂದಲ್ಲಿ ಯಾವುದೇ ಸೂಚನೆ ನೀಡದೆ ಹೊರಗುತ್ತಿಗೆ ಆಧಾರದ ಕರಾರನ್ನು ರದ್ದುಪಡಿಸಲಾಗುವುದು. |
| 15 | ವಾಹನ ಚಾಲಕರು ಒಂದು ವೇಳೆ ಕರಾರು ಒಪ್ಪಂದವನ್ನು ರದ್ದುಪಡಿಸಬೇಕಾದರೆ, ಒಂದು ತಿಂಗಳು ಮುಂಚಿತವಾಗಿ ಈ ಕಛೇರಿಗೆ ಲಿಖಿತ ಮೂಲಕ ತಿಳಿಸಬೇಕು. ತಪ್ಪಿದ್ದಲ್ಲಿ ಒಂದು ತಿಂಗಳ ವಾಹನದ ಬಾಡಿಗೆ ಮೊತ್ತವನ್ನು ನೀಡುವುದಿಲ್ಲ ಹಾಗೂ ಇದಕ್ಕೂ ಮೊದಲು ಸಹ ಕರಾರು ರದ್ದುಗೊಳಿಸುವ ಹಕ್ಕು ಆಯುಕ್ತರು/ಅಪರ ಆಯುಕ್ತರವರದ್ದಾಗಿರುತ್ತದೆ. |
| 16 | ಯಾವುದೇ ಸೂಚನೆ ನೀಡದೆ ಟೆಂಡರ್ ಅನ್ನು ತಿರಸ್ಕರಿಸುವ ಮತ್ತು ಪಡೆಯುವ ಹಕ್ಕು ವಾಣಿಜ್ಯ ತೆರಿಗೆ ಆಯುಕ್ತರಿಗೆ/ಜಂಟಿ ಆಯುಕ್ತರಿಗೆ ಇರುತ್ತದೆ. |
| 17 | ಪ್ರತಿ ವಾಹನದ ಗುಣಮಟ್ಟವನ್ನು ಹಾಗೂ ಚಾಲನ ಕೌಶಲ್ಯವನ್ನು ಪರಿಶೀಲಿಸಿ ನಂತರವೇ ವಾಹನವನ್ನು ತೆಗೆದುಕೊಳ್ಳಲಾಗುವುದು. |
| 18 | ಸರ್ಕಾರಿ ರಜಾ ದಿನಗಳಲ್ಲಿ ಬೇರೆ ರೀತಿಯ ಓಲೋ ಊಬರ್ ಅಥವಾ ಇನ್ನಾವುದೇ ಖಾಸಗಿ ಸೇವೇಯನ್ನು ಕೈಗೊಂಡು, ಯಾವುದೇ ರೀತಿಯ ಅನಾಹುತಗಳಾದರೆ ಖಾಸಗಿ ವಾಹನ ಮಾಲೀಕ/ಚಾಲಕರೇ ಕಾರಣರಾಗುತ್ತಾರೆ. ಇಲಾಖೆ ಯಾವುದೇ ರೀತಿಯಲ್ಲಿಯೂ ಬಾಧ್ಯಸ್ಥರಾಗುವುದಿಲ್ಲ |

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು, (ಆಡಳಿತ),
ವಿ.ಸ&ಸೇ.ತೆ.ಕ.–2, ಬೆಂಗಳೂರು.

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು
(ಆಡಳಿತ) ವಿ.ಸ.& ಸೇ.ತೆ.ಕ-2, ಬೆಂಗಳೂರು

ಪ್ರತಿಗಳನ್ನು:-

1. ವಾಣಿಜ್ಯ ತೆರಿಗೆಗಳ ಅಯುಕ್ತರು (ಕರ್ನಾಟಕ) ಬೆಂಗಳೂರು. ಇವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.
2. ವಾಣಿಜ್ಯ ತೆರಿಗೆಗಳ ಅಪರ ಅಯುಕ್ತರು (ಕೇ.ಕ)–2 ಬೆಂಗಳೂರು. ಇವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.
3. ವಾಣಿಜ್ಯ ತೆರಿಗೆ ಉಪ ಅಯುಕ್ತರು, ಗಣಕ ಕೇಂದ್ರ, ಬೆಂಗಳೂರು. ಇವರಿಗೆ ಸದರಿ ಪತ್ರವನ್ನು ಅಂತರ್ಜಾಲದಲ್ಲಿ ಪ್ರಕಟಿಸಲು ಕೋರಲಾಗಿದೆ.
4. ವಾಣಿಜ್ಯ ತೆರಿಗೆಳ ಜಂಟಿ ಅಯುಕ್ತರು (ಆಡಳಿತ) ವಿ.ಸ ಮತ್ತು ಸೇ.ತೆ.ಕ–01, 03, 04, 05, 06, ಬೆಂಗಳೂರು. ಸದರಿ ಪ್ರಕಟಣೆಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಲಾಗಿದೆ.
5. ವಾಣಿಜ್ಯ ತೆರಿಗೆ ಅಪರ ಅಯುಕ್ತರು (ಜಾರಿ) ದ.ವ. ಬೆಂಗಳೂರು ಮತ್ತು ವಾಣಿಜ್ಯ ತೆರಿಗೆ ಜಂಟಿ ಅಯುಕ್ತರು (ಜಾಗೃತಿ) ಬೆಂಗಳೂರು. ಇವರಿಗೆ ಪ್ರಕಟಣೆಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಲಾಗಿದೆ.
6. ಸಾರ್ವಜನಿಕ ಮಾಹಿತಿಗಾಗಿ ಸೂಚನಾ ಫಲಕಕ್ಕೆ.
7. ಕಛೇರಿ ಪ್ರತಿ.